**ಕರ್ನಾಟಕ ಸರ್ಕಾರ**

**ನಿರ್ದೇಶಕರು, ಮಕ್ಕಳ ರಕ್ಷಣಾ ನಿರ್ದೇಶನಾಲಯ ಹಾಗೂ ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು ಇವರು ಹೊರಡಿಸಿರುವ ನಡವಳಿಗಳು**

**ವಿಷಯ:** ಕೋವಿಡ್-19ರ ಕಾರಣಗಳಿಂದ ಪೋಷಕರಿಬ್ಬರನ್ನೂ ಕಳೆದುಕೊಂಡ 18 ವರ್ಷದೊಳಗಿನ ಮಕ್ಕಳಿಗೆ **"ಮುಖ್ಯಮಂತ್ರಿಗಳ ಬಾಲ ಸೇವಾ ಯೋಜನೆ"**ಯಡಿ ಅನುದಾನ ಬಿಡುಗಡೆ ಮಾಡುತ್ತಿರುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ: ಮಮಇ 65 ಮಭಾಬ 2021, ದಿನಾಂಕ:25-06-2021.

* * *

<u>ಪ್ರಸ್ತಾವನೆ:</u>

ದೇಶದಲ್ಲಿ ಕೋವಿಡ್-19 ರ ಸೋಂಕಿನಿಂದಾಗಿ ಕೆಲವು ಮಕ್ಕಳು ಪಾಲಕರನ್ನು ಕಳೆದುಕೊಳ್ಳುತ್ತಿದ್ದು, ತಂದೆತಾಯಿ ಇಬ್ಬರನ್ನೂ ಕಳೆದುಕೊಂಡಂತಹ 18 ವರ್ಷದ ಒಳಗಿನ ಮಕ್ಕಳಿಗೆ ರಕ್ಷಣೆ ನೀಡಿ, ಪಾಲನೆ ಆರೈಕೆ ಒದಗಿಸಿ ಅವರ ಸರ್ವತೋಮುಖ ಬೆಳವಣಿಗೆಗೆ ಅಗತ್ಯವಾದ ಸೌಕರ್ಯಗಳನ್ನು ಒದಗಿಸುವುದು ಬಾಲನ್ಯಾಯ ಕಾಯ್ದೆ ಅಡಿಯಲ್ಲಿ ಶಾಸನ ಬದ್ಧತೆಯಾಗಿರುತ್ತದೆ. ಕೋವಿಡ್-19ರ ಕಾರಣದಿಂದ ಪೋಷಕರಿಬ್ಬರನ್ನೂ ಕಳೆದುಕೊಂಡು ವಿಸ್ತೃತ ಕುಟುಂಬದ ಸದಸ್ಯರ ಆರೈಕೆಯಲ್ಲಿರುವ ಮಕ್ಕಳಿಗೆ ಪ್ರತಿ ತಿಂಗಳು ರೂ.3,500/-ಗಳ ಧನ ಸಹಾಯವನ್ನು ಈ ಮಕ್ಕಳ ಸಮಗ್ರ ರಕ್ಷಣೆ ಮತ್ತು ಪಾಲನೆಗಾಗಿ ಮುಖ್ಯ ಮಂತ್ರಿಗಳು ಘೋಷಿಸಿರುತ್ತಾರೆ ಮತ್ತು ಉಲ್ಲೇಖದ ಸರ್ಕಾರದ ಆದೇಶದನ್ವಯ ಮಂಜೂರಾತಿ ಸಹಾ ದೊರೆತಿರುತ್ತದೆ.

2021-22ನೇ ಸಾಲಿನಲ್ಲಿ ಅಂದಾಜು 250 ಫಲಾನುಭವಿಗಳಿಗೆ "ಮುಖ್ಯಮಂತ್ರಿ ಬಾಲಸೇವಾ ಯೋಜನೆ"ಯಡಿ ಆರ್ಥಿಕ ಸಹಾಯವನ್ನು ನೀಡಲು ಉದ್ದೇಶಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಪ್ರಾಯೋಜಕತ್ವ ಕಾರ್ಯಕ್ರಮದಡಿ ಕೇಂದ್ರ ಸರ್ಕಾರದಿಂದ ಪ್ರತಿ ಫಲಾನುಭವಿಗೆ ರೂ.2000/-ಗಳನ್ನು ನಿಗಧಿಪಡಿಸಿದ್ದು, ಇದರಲ್ಲಿ ಕೇಂದ್ರ ಸರ್ಕಾರದ ಪಾಲು (60%) ರೂ.1200/-ಗಳು ಹಾಗೂ ರಾಜ್ಯ ಸರ್ಕಾರದ ಪಾಲು (40%) ರೂ.800/-ಗಳು ಆಗಿರುತ್ತದೆ. "ಮುಖ್ಯಮಂತ್ರಿ ಬಾಲಸೇವಾ ಯೋಜನೆ"ಯಡಿ ಪ್ರತಿ ಫಲಾನುಭವಿಗೆ ಮಾಹೆಯಾನ ರೂ.3500/-ಗಳ ಆರ್ಥಿಕ ಸೌಲಭ್ಯ ಒದಗಿಸಬೇಕಾಗಿದ್ದು, ಪ್ರಾಯೋಜಕತ್ವ ಕಾರ್ಯಕ್ರಮದಡಿ ಪರಿಗಣಿಸಲು ಹೆಚ್ಚುವರಿಯಾಗಿ ಭರಿಸಬೇಕಾದ ರೂ.1500/-ಗಳನ್ನು ಸಹಾ ರಾಜ್ಯ ಸರ್ಕಾರದಿಂದ ಭರಿಸಲು ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಅನುಮೋದನೆ ದೊರೆತಿರುತ್ತದೆ.

ಕೋವಿಡ್-19 ರ ಕಾರಣದಿಂದ ಪೋಷಕರಿಬ್ಬರನ್ನೂ ಕಳೆದುಕೊಂಡ 18 ವರ್ಷದೊಳಗಿನ ಮಕ್ಕಳು, ವಿಸ್ತೃತ ಕುಟುಂಬದ ಆರೈಕೆಯಲ್ಲಿ ಪಾಲನೆ ಮತ್ತು ರಕ್ಷಣೆ ಪಡೆಯುತ್ತಿದ್ದು, ಅವರುಗಳ ಸರ್ವತೋಮುಖ ಬೆಳವಣಿಗೆಗೆ ಅಗತ್ಯವಾದ ಸೌಕರ್ಯಗಳನ್ನು ಒದಗಿಸಲು "ಮುಖ್ಯಮಂತ್ರಿಗಳ ಬಾಲ ಸೇವಾ ಯೋಜನೆ"ಯಡಿ ಪ್ರತಿ ಫಲಾನುಭವಿಗೆ ಮಾಹೆಯಾನ ರೂ.3,500/-ಗಳ ಅನುದಾನವನ್ನು ಆರ್ಥಿಕ ಸಾಲಿಗೆ ಅನ್ವಯವಾಗುವಂತೆ ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ.

2021-22ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಅನುದಾನ ಇದುವರೆವಿಗೂ ಸ್ವೀಕೃತಿಗೊಂಡಿರುವುದಿಲ್ಲ ಹಾಗೂ ಕೋವಿಡ್ ತುರ್ತು ಪರಿಸ್ಥಿತಿಯಲ್ಲಿ ಆರ್ಥಿಕ ಸಹಾಯವನ್ನು ಕೂಡಲೇಬಿಡುಗಡೆ ಮಾಡಬೇಕಿರುವುದು ಅತ್ಯವಶ್ಯವಾಗಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

ಸಂಖ್ಯೆ: ಐಸಿಪಿಎಸ್/SARA-11/ಕೋ.ಪ್ರಾ/2021-22

ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ,
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು.
ದಿನಾಂಕ: ೦೭-07-2021.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಕೋವಿಡ್-19ರ ಕಾರಣಗಳಿಂದ ಪೋಷಕರಿಬ್ಬರನ್ನೂ ಕಳೆದುಕೊಂಡು ವಿಸ್ತೃತ ಕುಟುಂಬದ ಪೋಷಕರ ಆರೈಕೆಯಲ್ಲಿರುವ 18 ವರ್ಷದ ಒಳಗಿನ **"ಮುಖ್ಯಮಂತ್ರಿ ಬಾಲಸೇವಾ ಯೋಜನೆ"**ಯ ಎಲ್ಲಾ ಅರ್ಹ ಫಲಾನುಭವಿಗಳಿಗೆ ಕೆಳಕಂಡ ಷರತ್ತುಗಳಿಗೊಳಪಟ್ಟು ಮಾಹೆಯಾನ ರೂ.3,500/- ಗಳ ಆರ್ಥಿಕ ಧನಸಹಾಯವನ್ನು, ಮಕ್ಕಳ ಸಮಗ್ರ ಪಾಲನೆ ಮತ್ತು ರಕ್ಷಣೆಗಾಗಿ ಈ ಆದೇಶದ ಅನುಬಂಧದನ್ವಯ, ಆರ್ಥಿಕ ಸಾಲಿಗೆ ಒಟ್ಟು ಮೊತ್ತ ರೂ.1,00,00,000/- (ಒಂದು ಕೋಟಿ ರೂಪಾಯಿಗಳು ಮಾತ್ರ)ಗಳನ್ನು ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಇವರ ಜಂಟಿ ಖಾತೆಗೆ ಬಿಡುಗಡೆ ಮಾಡಿ ಆದೇಶಿಸಿದೆ. ಸದರಿ ಅನುದಾನವನ್ನು ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯ ಲೆಕ್ಕ ಶೀರ್ಷಿಕೆ 2235-02-102-0-36 ರಲ್ಲಿ ಲಭ್ಯವಿರುವ ಫ್ಲೆಕ್ಸಿ ಫಂಡ್‌ನಿಂದ 2021-22ನೇ ಸಾಲಿನಲ್ಲಿ ಭರಿಸುವುದು.

**ನಿಬಂಧನೆ:**

1. "ಮುಖ್ಯಮಂತ್ರಿ ಬಾಲಸೇವಾ ಯೋಜನೆ"ಯ ಸರ್ಕಾರದ ಆದೇಶದಲ್ಲಿನ ಮಾರ್ಗಸೂಚಿಗಳನ್ನು ಕಡ್ಡಯವಾಗಿ ಪಾಲಿಸತಕ್ಕದ್ದು.
2. "ಮುಖ್ಯಮಂತ್ರಿ ಬಾಲಸೇವಾ ಯೋಜನೆ"ಯ ಸರ್ಕಾರದ ಆದೇಶದಲ್ಲಿನ ಮಾರ್ಗಸೂಚಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಅರ್ಹ ಫಲಾನುಭವಿಗಳಿಂದ ನಿಗದಿತ ಅರ್ಜಿ ನಮೂನೆ ಹಾಗೂ ಇತರೆ ಸಂಬಂಧಿತ ದಾಖಲಾತಿಗಳನ್ನು ಪಡೆದು, "ಜಿಲ್ಲಾ ಮಟ್ಟದ ಸಮಿತಿ"ಯಿಂದ ಅನುಮೋದನೆ ಪಡೆಯಲು ಅಗತ್ಯ ಕ್ರಮವಹಿಸುವುದು. ಪ್ರಕರಣವಾರು ಪ್ರತೀ ಫಲಾನುಭವಿಯ ವೈಯಕ್ತಿಕ ಕಡತವನ್ನು ಕಡ್ಡಾಯವಾಗಿ ನಿರ್ವಹಿಸುವುದು.
3. "ಮುಖ್ಯಮಂತ್ರಿ ಬಾಲಸೇವಾ ಯೋಜನೆ"ಯಡಿ ಮಗುವನ್ನು ಫಲಾನುಭವಿಯೆಂದು ಪರಿಗಣಿಸಿ ಆದೇಶ ಹೊರಡಿಸಿದ ದಿನಾಂಕದಿಂದ ಅನ್ವಯಿಸುವಂತೆ "ಮುಖ್ಯಮಂತ್ರಿ ಬಾಲಸೇವಾ ಯೋಜನೆ"ಯ ಆರ್ಥಿಕ ಸೌಲಭ್ಯವನ್ನು ಫಲಾನುಭವಿ ಮತ್ತು ಪೋಷಕರ ಜಂಟಿ ಖಾತೆಗೆ ಪ್ರತಿ ಮಾಹೆಯಾನ ಜಮೆಗೊಳಿಸತಕ್ಕದ್ದು.

4. ಜಿಲ್ಲೆಗಳಲ್ಲಿ ಪ್ರಕರಣವಾರು ಫಲಾನುಭವಿಗಳಿಗೆ ಅನ್ವಯವಾಗುವಂತೆ ಬಿಡುಗಡೆಯಾಗುವ ಅನುದಾನವನ್ನು ಮರು ಬಿಡುಗಡೆಗೊಳಿಸಲು ಅಗತ್ಯ ಕ್ರಮವಹಿಸತಕ್ಕದ್ದು. ಮುಂಬರುವ ದಿನಗಳಲ್ಲಿ "ಮುಖ್ಯಮಂತ್ರಿ ಬಾಲಸೇವಾ ಯೋಜನೆ"ಯ ವ್ಯಾಪ್ತಿಗೆ ಒಳಪಡುವ ಅರ್ಹ ಮಕ್ಕಳಿಗೂ ಸಹಾ ಈ ಯೋಜನೆಯ ಸೌಲಭ್ಯವನ್ನು ವಿಸ್ತರಿಸಿ ಆರ್ಥಿಕ ಸೌಲಭ್ಯ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳುವುದು. ಫಲಾನುಭವಿಗಳಿಗೆ ಅನುದಾನ ಮರುಬಿಡುಗಡೆ ಮಾಡಲು ಯಾವುದೇ ವಿಳಂಬ ಉಂಟಾದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳೇ ನೇರ ಹೊಣೆಗಾರರಾಗುತ್ತಾರೆ.
5. ಫಲಾನುಭವಿಯ ಪೋಷಕರು ಒಂದು ಜಿಲ್ಲೆಯಲ್ಲಿ ಮೃತಪಟ್ಟಿದ್ದು ಆದರೆ ಪ್ರಸ್ತುತ ಫಲಾನುಭವಿಯು ವಿಸ್ತೃತ ಕುಟುಂಬದ ಪೋಷಕರೊಡನೆ ಮತ್ತೊಂದು ಜಿಲ್ಲೆಯಲ್ಲಿ ವಾಸಿಸುತ್ತಿದ್ದಲ್ಲಿ, ಪ್ರಸ್ತುತ ಫಲಾನುಭವಿಯು ವಾಸವಿರುವ ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮೂಲಕ ಸದರಿ ಫಲಾನುಭವಿಗೆ "ಮುಖ್ಯಮಂತ್ರಿ ಬಾಲಸೇವಾ ಯೋಜನೆ"ಯ ಸೌಲಭ್ಯವನ್ನು ಒದಗಿಸಲು ಅಗತ್ಯ ಕ್ರಮವಹಿಸತಕ್ಕದ್ದು
6. ಫಲಾನುಭವಿಗಳಿಗೆ ಬಿಡುಗಡೆ ಮಾಡಿದ ಅನುದಾನದ ವಿವರಗಳನ್ನು ಲಗತ್ತಿಸಿದ ನಮೂನೆಯಲ್ಲಿ ಪ್ರತಿ ಮಾಹೆ ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.

02.07.2021

ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ,
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ
ಸೊಸೈಟಿ, ಬೆಂಗಳೂರು.

ಪ್ರತಿಯನ್ನು:

1. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಎಲ್ಲಾ ಜಿಲ್ಲೆಯವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಹಾಗೂ ಅರ್ಹ ಫಲಾನುಭವಿಗಳ ಖಾತೆಗೆ ಶೀಘ್ರವಾಗಿ ಜಮೆಗೊಳಿಸಲು ಅಗತ್ಯ ಕ್ರಮಕೈಗೊಳ್ಳಲು ತಿಳಿಸಿದೆ.
2. ಲೆಕ್ಕಾಧಿಕಾರಿಗಳು, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು, ಇವರಿಗೆ, ಒಟ್ಟು ರೂ.1,00,00,000/-(ಒಂದು ಕೋಟಿ ರೂಪಾಯಿಗಳು ಮಾತ್ರ)ಗಳನ್ನು ಅನುಬಂಧದನ್ವಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಗೆ ಅನುದಾನವನ್ನು ಆರ್.ಟಿ.ಜಿ.ಎಸ್ ಮೂಲಕ ಬಿಡುಗಡೆ ಮಾಡಲು ಕೋರಿದೆ.
3. ಕಛೇರಿ ಪ್ರತಿ.

# ಅನುಬಂಧ

"ಮುಖ್ಯಮಂತ್ರಿಗಳ ಬಾಲ ಸೇವಾ ಯೋಜನೆ"ಯಡಿ 2021-22ನೇ ಸಾಲಿನ ವಾರ್ಷಿಕ ಅನುದಾನ ಬಿಡುಗಡೆ

**ಸಂಖ್ಯೆ: ಐಸಿಪಿಎಸ್/SARA-11/ಕೋ.ಪ್ರಾ/2021-22** **ದಿನಾಂಕ: 02-07-2021.**

| ಕ್ರ. ಸಂ. | ಜಿಲ್ಲೆ | ಬಿಡುಗಡೆ ಮಾಡುತ್ತಿರುವ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|
| 1 | ಬೆಂಗಳೂರು ನಗರ | 13,00,000 |
| 2 | ಬಾಗಲಕೋಟ | 3,00,000 |
| 3 | ಬೆಂ.ಗ್ರಾಮಾಂತರ | 3,00,000 |
| 4 | ಬೆಳಗಾಂ | 3,00,000 |
| 5 | ಬಳ್ಳಾರಿ | 3,00,000 |
| 6 | ಬೀದರ | 3,00,000 |
| 7 | ಬಿಜಾಪುರ | 3,00,000 |
| 8 | ಚಾಮರಾಜನಗರ | 3,00,000 |
| 9 | ಚಿಕ್ಕಬಳ್ಳಾಪುರ | 3,00,000 |
| 10 | ಚಿಕ್ಕಮಗಳೂರು | 3,00,000 |
| 11 | ಚಿತ್ರದುರ್ಗ | 3,00,000 |
| 12 | ದಕ್ಷಿಣ ಕನ್ನಡ | 3,00,000 |
| 13 | ದಾವಣಗೆರೆ | 3,00,000 |
| 14 | ಧಾರವಾಡ | 3,00,000 |
| 15 | ಗದಗ | 3,00,000 |
| 16 | ಹಾಸನ | 3,00,000 |
| 17 | ಹಾವೇರಿ | 3,00,000 |
| 18 | ಕಲಬುರಗಿ | 3,00,000 |
| 19 | ಕೊಡಗು | 3,00,000 |
| 20 | ಕೋಲಾರ | 3,00,000 |
| 21 | ಕೊಪ್ಪಳ | 3,00,000 |
| 22 | ಮಂಡ್ಯ | 3,00,000 |
| 23 | ಮೈಸೂರು | 3,00,000 |
| 24 | ರಾಯಚೂರು | 3,00,000 |
| 25 | ರಾಮನಗರ | 3,00,000 |

| | | |
|---|---|---|
| 26 | ಶಿವಮೊಗ್ಗ | 3,00,000 |
| 27 | ತುಮಕೂರು | 3,00,000 |
| 28 | ಉಡುಪಿ | 3,00,000 |
| 29 | ಉತ್ತರಕನ್ನಡ | 3,00,000 |
| 30 | ಯಾದಗಿರಿ | 3,00,000 |
| **ಒಟ್ಟು** | | **1,00,00,000** |
| ರೂ. ಒಂದು ಕೋಟಿ ರೂಪಾಯಿಗಳು ಮಾತ್ರ. | | |

02.07.2021

ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ, ಹಾಗೂ
ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ
ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು.

# ನಮೂನೆ

## "ಮುಖ್ಯಮಂತ್ರಿಗಳ ಬಾಲ ಸೇವಾ ಯೋಜನೆ"ಯಡಿ ಫಲಾನುಭವಿಗಳಿಗೆ ಆರ್ಥಿಕ ಸೌಲಭ್ಯ ಒದಗಿಸಿರುವ ಬಗ್ಗೆ ಮಾಸಿಕ ವರದಿ

ಜಿಲ್ಲೆಯ ಹೆಸರು : ---

| ಕ್ರ. ಸಂ. | ಫಲಾನುಭವಿಯ ಹೆಸರು | ಫಲಾನುಭವಿಗಳ ಖಾತೆಗೆ ಜಮೆ ಮಾಡಿದ ಮೊತ್ತ | ಅನುದಾನವನ್ನು ಯಾವ ಮಾಹೆ ಮತ್ತು ವರ್ಷಕ್ಕಾಗಿ ನೀಡಲಾಗಿದೆ. | ಆರ್ಥಿಕ ಸೌಲಭ್ಯ ಆರ್‌ಟಿಜಿಎಸ್ ಮೂಲಕ ಜಮೆಗೊಂಡ ದಿನಾಂಕ | ಫಲಾನುಭವಿಗಳ ಬ್ಯಾಂಕ್ ವಿವರ | | | | UTR (Unique Transaction Reference) ಸಂಖ್ಯೆ | ಫಲಾನುಭವಿಗಳ ಖಾತೆಗೆ ಅನುದಾನ ಜಮೆಯಾದ ಬಗ್ಗೆ ಖಚಿತ ಪಡಿಸಿಕೊಳ್ಳಲು ದೂರವಾಣಿ ಕರೆ ಮಾಡಿದ ದಿನಾಂಕ | ಘಟಕದಿಂದ ಕರೆ ಮಾಡಿದ ಸಿಬ್ಬಂದಿಯ ವಿವರ | | | ಷರಾ |
|---|---|---|---|---|---|---|---|---|---|---|---|---|---|---|
| | | | | | ಬ್ಯಾಂಕ್ ಹೆಸರು | ಶಾಖೆಯ ಹೆಸರು | ಖಾತೆಯ ಸಂಖ್ಯೆ | IFSC No. | | | ಹೆಸರು | ಪದನಾಮ | ಸಹಿ | |
| 1 | 2 | 3 | 4 | 5 | 6 | | | | 7 | 8 | 9 | | | 10 |
| | | | | | | | | | | | | | | |
| | | | | | | | | | | | | | | |
| | | | | | | | | | | | | | | |
| | | | | | | | | | | | | | | |
| | | | | | | | | | | | | | | |

ಸಹಿ/-

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು

______ಜಿಲ್ಲೆ

D\covid-19\Special Sponsorship